**ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ**

**ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀ ಕೆ ವಿ ಡಿ ವಕೀಲರಿಂದಃ**

1. ನಾನು ವಿದ್ಯಾಭ್ಯಾಸ ಮಾಡಿಲ್ಲ. ನನ್ನ ಮಾವನ ಹೆಸರು ಪೂಜಾರ್ ತಿಮ್ಮಣ್ಣ. ಅತ್ತೆ ಹೆಸರು ಮಾರಕ್ಕ. ನನ್ನ ಅತ್ತೆ ಮಾವನಿಗೆ 4 ಜನ ಮಕ್ಕಳು. ಮೊದಲನೇಯವರು ತಿಪ್ಪೇಸ್ವಾಮಿ, ರಾಮಾಂಜನೇಯ, ರಾಜು ಮತ್ತು ಲಕ್ಷ್ಮಿದೇವಿ. ರಾಜು ಈಗ ಜೀವಂತ ಇಲ್ಲ. ನನ್ನ ಮಾವ ಈಗ ಜೀವಂತ ಇಲ್ಲ. ನನ್ನ ಅತ್ತೆ ಇದ್ದಾರೆ. ನನ್ನ ಅತ್ತೆಗೆ 50 ರಿಂದ 60 ವರ್ಷ ವಯಸ್ಸು ಎಂದರೆ ಹೌದು. ನನ್ನ ಗಂಡನಿಗಿಂತ ಮೊದಲು ತಿಪ್ಪೇಸ್ವಾಮಿ ಎಂದರೆ ಹೌದು. ನನ್ನ ಗಂಡ ತೀರಿಕೊಳ್ಳುವ ಸಮಯದಲ್ಲಿ 40 ವರ್ಷ ವಯಸ್ಸು ಆಗಿತ್ತು. ಈ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ನನ್ನ ಗಂಡ ಸಾಯುವ ಕಾಲಕ್ಕೆ 48 ವರ್ಷ ವಯಸ್ಸು ಇತ್ತು ಎಂದರೆ ಸರಿಯಲ್ಲ. ಅಪಘಾತ 08.09.2023 ರಂದು 3.45 ಗಂಟೆಗೆ ಆಗಿದೆ. ಬೈಕ್ ನನ್ನ ತಮ್ಮನ ಹೆಸರಿನಲ್ಲಿ ಇರುತ್ತದೆ. ಬೈಕ್ ಗೆ ಇನ್ಸುರೆನ್ಸ ಇಲ್ಲ ಎಂದರೆ ಇದೆ. ಈ ಬಗ್ಗೆ ದಾಖಲೆ ಹಾಜರುಪಡಿಸಬಲ್ಲೆ. ಆ ದಿನ ನನ್ನ ಗಂಡ ಚಲಾಯಿಸುತಿದ್ದ ಬೈಕ್ ಗೆ ಡಿಎಲ್ ಇರಲಿಲ್ಲ ಎಂದರೆ ಹೌದು. ಬಿದರಕೆರೆ ಕ್ರಾಸ್ ರಸ್ತೆ ಮಧ್ಯದಲ್ಲಿ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನಾನು ಅಪಘಾತ ಕಣ್ಣಾರೆ ನೋಡಿಲ್ಲ ಎಂದರೆ ಹೌದು. ಆ ದಿನ ದೂರು ನನ್ನ ತಾಯಿ ಕೊಟ್ಟಿರುತ್ತಾರೆ. ದೂರು ಕೊಟ್ಟರೆ ಹೆಬ್ಬಟ್ಟು ಮತ್ತು ಸಹಿ ಮಾಡುತ್ತಾರೆ ಎಂದರೆ ಹೌದು. ದೂರಿನಲ್ಲಿ ಯಾರದೇ ಸಹಿ ಇರುವುದಿಲ್ಲ ಎಂದರೆ ಹೌದು. ಯಾರು ದೂರು ಕೊಟ್ಟಿಲ್ಲ ಪೊಲೀಸರು ಅವರೇ ಬರೆದುಕೊಂಡು ಕೇಸ್ ಹಾಕಿದ್ದಾರೆ ಎಂದರೆ ಸರಿಯಲ್ಲ ನನ್ನ ತಾಯಿ ಪೊಲೀಸ್ ಠಾಣೆಗೆ ಹೋಗಿದ್ದರು ಮತ್ತು ದೂರು ಕೊಟ್ಟಿರುತ್ತಾರೆ. ಅಪಘಾತ ಆದ ನಂತರ ನನ್ನ ಗಂಡನನ್ನು ನಾನು ನಿಮಾನ್ಸ ನಲ್ಲಿ ನೋಡಿರುತ್ತೇನೆ. ಅವರು 18.09.2023 ರಂದು ತೀರಿಕೊಂಡಿದ್ದಾರೆ. ನನ್ನ ಗಂಡ ಗಾರೆ ಕೆಲಸ ಮಾಡುತಿದ್ದು ಲೇಬರ್ ಕಾರ್ಡ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ. ನನ್ನ ಗಂಡ ಯಾವುದೇ ಗಾರೆ ಕೆಲಸ ಮಾಡುತ್ತಿರಲಿಲ್ಲ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ.

ಅಂತ್ಯಕ್ರಿಯೆಗೊಸ್ಕರ 2 ಲಕ್ಷ ಖರ್ಚು ಮಾಡಿರುತ್ತೇನೆ ಅಂತ ಹೇಳಿದ ಬಗ್ಗೆ ದಾಖಲೆ ಹಾಜುಪಡಿಸಿಲ್ಲ ಎಂದರೆ ಸರಿಯಲ್ಲ.ಅಂಬುಲೆನ್ಸ ಬಿಲ್ ಕೂಡ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಗೆ 3 ಲಕ್ಷ ಖರ್ಚು ಮಾಡಿರುತ್ತೇನೆ ಅಂತ ಹೇಳಿದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿರಲಿಲ್ಲ. ಶವ ಸಾಗಿಸಲು ಅರ್ಜಿಯಲ್ಲಿ ಖರ್ಚಾಗಿದೆ ಅಂತ ಹೇಳಿದಷ್ಟು ಯಾವುದೇ ಬಿಲ್ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ತೀರಿಕೊಳ್ಳುವ ಸಮಯದಲ್ಲಿ 35 ವರ್ಷ ವಯಸ್ಸು ಇತ್ತು ಅಂತ ಹೇಳುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಹೌದು. ನಾನು ರಾಮಾಂಜನೇಯ ರವರ ಹೆಂಡತಿ ಅಂತ ಹೇಳುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಟಾಟಾ ಎಸಿ ಚಾಲಕನ ತಪ್ಪಿನಿಂದ ಅಪಘಾತ ಆಗಿದೆ ನನ್ನ ಗಂಡನ ತಪ್ಪಿನಿಂದ ಅಪಘಾತ ಆಗಿಲ್ಲ ಅಂತ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಅಪಘಾತ ಆದ ಸ್ಥಳ ತಿರುವು ಎಂದರೆ ಹೌದು. ತಿರುವು ಇದ್ದುದರಿಂದ ದೂರದಿಂದ ಬರುವ ವ್ಯಕ್ತಿ ಕಾಣಲ್ಲ ಎಂದರೆ ಹೌದು. ಅಪಘಾತ ಮುಖಾಮುಖಿ ಡಿಕ್ಕಿಯಾಗಿದೆ ಎಂದರೆ ಹೌದು. ಅಪಘಾತ ರಸ್ತೆ ಮದ್ಯೆ ಆಗಿದೆ ಎಂದರೆ ಸರಿಯಲ್ಲ. ಪೊಲೀಸರೇ ದೂರು ಬರೆದುಕೊಂಡು ಯಾವುದೇ ಅಪಘಾತ ಆಗದೇ ಇದ್ದರೂ ಕೂಡ ಸುಳ್ಳು ಕೇಸ್ ಹಾಕಿದ್ದಾರೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಬರಲಿ ಅಂತ ಸುಳ್ಳು ಸಾಕ್ಷಿ ನುಡಿಯು ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**1 ನೇ ಅಪರ ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್.ಸಿ.**
**ನ್ಯಾಯಾಧೀಶರು, ಚಿತ್ರದುರ್ಗ**